सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

1 ನೇ ಮಹಡಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳದ ಕಟ್ಟಡ (ಹಿಂಬಾಗ) ನಂ 3, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052

**ಸಂಖ್ಯೆ: ರಾಚುಆ:45:ಇಯುಬಿ:2021, ದಿನಾಂಕ 11-08-2021**

**ಪತ್ರಿಕಾ ಪ್ರಕಟಣೆ.**

ದಿನಾಂಕ 07-03-2013 ರಂದು ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಗಳಿಗೆ ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗಿರುತ್ತದೆ. ಸದರಿ ನಗರ ಸ್ಥಳೀಯ ಸಂಸ್ಥೆಗಳ ಅವಧಿಯು ಕ್ರಮವಾಗಿ ೦9-03-2019, 01-04-2019 ಹಾಗೂ 06-03-2019 ರಂದು ಮುಕ್ತಾಯವಾಗಿರುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರಸಭೆ ಮತ್ತು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಪುರಸಭೆಗಳಿಗೆ ದಿನಾಂಕ 07-03-2013 ರಂದು ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗಿದ್ದು, ಇವುಗಳ ಅವಧಿಯು ಕ್ರಮವಾಗಿ 12-03-2019 ಮತ್ತು 04-06-2019 ರಂದು ಮುಕ್ತಾಯವಾಗಿರುತ್ತದೆ. ಸದರಿ 5 ನಗರ ಸ್ಥಳೀಯ ಸಂಸ್ಥೆಗಳಿಗೆ 2011 ರ ಜನಗಣತಿಯಂತೆ ಸರ್ಕಾರವು ಕ್ಷೇತ್ರ ಪುನರ್ವಿಂಗಡಣೆ ಮಾಡಿ. ವಾರ್ಡುವಾರು ಮೀಸಲಾತಿಯನ್ನು ನಿಗದಿಪಡಿಸಿ ಅಧಿಸೂಚಿಸಿ ರಾಜ್ಯಪತ್ರದಲ್ಲಿ ಪ್ರಕಟಿಸಿದೆ.

ಸರ್ಕಾರವು ನಿಗದಿಪಡಿಸಿದ ಕ್ಷೇತ್ರವಿಂಗಡಣೆ ಮತ್ತು ವಾರ್ಡುವಾರು ಮೀಸಲಾತಿ ಅಧಿಸೂಚನೆಗಳನ್ನು ಪ್ರಶ್ನಿಸಿ ಮಾನ್ಯ ಉಚ್ಛನ್ಯಾಯಾಲಯದ ವಿವಿಧ ಪೀಠಗಳಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. ಪ್ರಸ್ತುತ ಮಾನ್ಯ ಉಚ್ಛ ನ್ಯಾಯಾಲಯ ಬೆಂಗಳೂರು ಇಲ್ಲಿ ನ್ಯಾಯಾಲಯವು ಸ್ವಯಂಪ್ರೇರಿತವಾಗಿ ದಾಖಲು ಮಾಡಿಕೊಂಡಿದ್ದ ಪ್ರಕರಣ ಸಂಖ್ಯೆ 14925/2020 (SUO-MOTU) ಈ ಪ್ರಕರಣದಲ್ಲಿ ದಿನಾಂಕ 04-08-2021 ರಂದು ನ್ಯಾಯಾಲಯವು ಅವಧಿ ಮುಕ್ತಾಯಗೊಂಡಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದೆ.

ಬೀದರ್ ನಗರಸಭೆಯ ವಾರ್ಡು ಸಂಖ್ಯೆ 26 ಮತ್ತು 32 ರ ಚುನಾವಣೆಗೆ ಕಳೆದ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ಉಚ್ಛ ನ್ಯಾಯಾಲಯದ ತಡೆಯಾಜ್ಞೆ ಇದ್ದುದರಿಂದ ಚುನಾವಣೆ ನಡೆಸಿರುವುದಿಲ್ಲ. ಆ ಬಳಿಕ ತಡೆಯಾಜ್ಞೆ ತೆರವುಗೊಂಡು ಉಚ್ಛ ನ್ಯಾಯಾಲಯವು ದಿನಾಂಕ 09-04-2021 ರಂದು ಪ್ರಕರಣವನ್ನು ವಜಾಗೊಳಿಸಿ ಚುನಾವಣೆ ನಡೆಸಲು ಆದೇಶಿಸಿರುತ್ತದೆ. ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರಸಭೆಯ ವಾರ್ಡು ಸಂಖ್ಯೆ 29 ರ ಅಭ್ಯರ್ಥಿಯ ಮರಣದ ಹಿನ್ನೆಲೆಯಲ್ಲಿ ಚುನಾವಣೆಯನ್ನು ರದ್ದುಗೊಳಿಸಲಾಗಿರುತ್ತದೆ. ಸದರಿ 2 ಸ್ಥಳೀಯ ಸಂಸ್ಥೆಗಳ 3 ವಾರ್ಡಗಳಿಗೆ ಸಾರ್ವತ್ರಿಕ ಚುನಾವಣೆಯನ್ನು ನಡೆಸಬೇಕಾಗಿರುತ್ತದೆ.

ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಒಟ್ಟು 21 ಸದಸ್ಯ ಸ್ಥಾನಗಳಿಗೆ (ಅನುಬಂಧ-3) ಉಪ ಚುನಾವಣೆಯನ್ನು ನಡೆಸಬೇಕಾಗಿರುತ್ತದೆ.

ಮೇಲ್ಕಂಡ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದ್ದು, ವಾರ್ಡುವಾರು ಮತದಾರರ ಪಟ್ಟಿಯನ್ನು ದಿನಾಂಕ 09-07-2021 ರಂದು ಸಂಬಂಧಿಸಿದ ಜಿಲಾದಿಕಾರಿಗಳು ಪ್ರಕಟಪಡಿಸಿರುತ್ತಾರೆ. ಅಂತಿಮ ವಾರ್ಡುವಾರು ಮೀಸಲಾತಿಯನ್ನು ಆಯೋಗದ ವೆಬ್‌ಸೈಟ್ www.karsec.gov.in ಪ್ರಚುರ ಪಡಿಸಲಾಗಿದೆ ಹಾಗೂ ಈ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಪೌರ ನಿಗಮಗಳ(ಚುನಾವಣೆ) ನಿಯಮಗಳು, 1979ರ ನಿಯಮ 3(1), ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಪ್ರಕರಣ 17 ಮತ್ತು ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ

ಚುನಾವಣೆ) ನಿಯಮಗಳು 1977ರ ನಿಯಮ 3 (1) ರಲ್ಲಿ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ ಮೇಲೆ ನಮೂದಿಸಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಸಾರ್ವತ್ರಿಕ ಚುನಾವಣೆ ಹಾಗೂ ಉಪ ಚುನಾವಣೆ ನಡೆಸಲು ಈ ಕೆಳಕಂಡ ವೇಳಾಪಟ್ಟಿಯನ್ನು ಪ್ರಕಟಿಸಿದೆ.

**ಚುನಾವಣಾ ವೇಳಾ ಪಟ್ಟಿ**

| | | |
|---|---|---|
| 1 | ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆಯನ್ನು ಹೊರಡಿಸುವ ದಿನಾಂಕ ಮತ್ತು ದಿನ | 16-08-2021 (ಸೋಮವಾರ) |
| 2 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ | 23-08-2021 (ಸೋಮವಾರ) |
| 3 | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ | 24-08-2021 (ಮಂಗಳವಾರ |
| 4 | ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ | 26-08-2021 (ಗುರುವಾರ) |
| **5** | **ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆಯವರೆಗೆ)** | **03-09-2021 (ಶುಕ್ರವಾರ)** |
| 6 | ಮರು ಮತದಾನ ಇದ್ದಲ್ಲಿ ಮತದಾನ ನಡೆಸಬೇಕಾದ ದಿನಾಂಕ ಮತ್ತು ದಿನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆವರೆಗೆ) | 05-09-2021 (ಭಾನುವಾರ) |
| 7 | ಮತಗಳ ಎಣಿಕೆಯ ದಿನಾಂಕ ಮತ್ತು ದಿನ (ಬೆಳಿಗ್ಗೆ 8.00 ಗಂಟೆಯಿಂದ) (ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ) | 06-09-2021 (ಸೋಮವಾರ) |
| 8 | ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ. | 06-09-2021 (ಸೋಮವಾರ) |

**ಸದಾಚಾರ ಸಂಹಿತೆಯು ದಿನಾಂಕ: 16-08-2021 ರಿಂದ ದಿನಾಂಕ: 06-09-2021 ರವರೆಗೆ ಸಾರ್ವತ್ರಿಕ ಚುನಾವಣೆ ನಡೆಯುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ಉಪ ಚುನಾವಣೆ ನಡೆಯುವ ವಾರ್ಡುಗಳ ವ್ಯಾಪ್ತಿಯಲ್ಲಿ ಜಾರಿಯಲ್ಲಿರುತ್ತದೆ.**

| ಕ್ರ.ಸಂ. | ನಗರ ಸ್ಥಳೀಯ ಸಂಸ್ಥೆ | ಒಟ್ಟು ವಾರ್ಡುಗಳ ಸಂಖ್ಯೆ | ಮತಗಟ್ಟೆಗಳ ಸಂಖ್ಯೆ | ಪುರುಷರು | ಮಹಿಳೆಯರು | ಇತರ | ಒಟ್ಟು |
|---|---|---|---|---|---|---|---|
| 1 | ಬೆಳಗಾವಿ | 58 | 415 | 213526 | 214838 | 0 | 428364 |
| 2 | ಹುಬ್ಬಳ್ಳಿ-ಧಾರವಾಡ | 82 | 837 | 403497 | 407954 | 86 | 811537 |
| 3 | ಕಲಬುರಗಿ | 55 | 533 | 258775 | 260543 | 146 | 51964 |
| 4 | ದೊಡ್ಡಬಳ್ಳಾಪುರ | 31 | 63 | 33016 | 33191 | 0 | 66207 |
| 5 | ತರೀಕೆರೆ | 23 | 28 | 14313 | 14977 | 0 | 29290 |
| 6 | ಭದ್ರಾವತಿ | 1 | 4 | 1878 | 1857 | 0 | 3735 |

| | | | | | | | |
|---|---|---|---|---|---|---|---|
| 7 | ಬೀದರ್ | 2 | 10 | 5065 | 4923 | 3 | 9991 |

- ಅಭ್ಯರ್ಥಿಗಳ ಚುನಾವಣಾ ವೆಚ್ಚಮಿತಿ: ಅಭ್ಯರ್ಥಿಗಳ ಚುನಾವಣಾ ವೆಚ್ಚದ ಗರಿಷ್ಠ ಮಿತಿಯು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆಗಳು | ವೆಚ್ಚಮಿತಿ (ರೂ. ಲಕ್ಷಗಳಲ್ಲಿ) |
|---|---|---|
| 1 | ಮಹಾನಗರಪಾಲಿಕೆ | 3.00 |
| 2 | ನಗರಸಭೆ | 2.00 |
| 3 | ಪುರಸಭೆ | 1.50 |
| 4 | ಪಟ್ಟಣ ಪಂಚಾಯಿತಿ | 1.00 |

- NOTA: ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2019 ದಿನಾಂಕ: 27.04.2020 ರಂತೆ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ವ್ಯಕ್ತಿಯು, ತನ್ನ ಇಚ್ಛೆಯಂತೆ, "ಯಾರೊಬ್ಬರಿಗೂ ತನ್ನ ಮತ ನೀಡಲು ಇಚ್ಛೆ ಇರುವುದಿಲ್ಲ" ಎಂಬ ತನ್ನ ತೀರ್ಮಾನವನ್ನು ರಹಸ್ಯವಾಗಿ ಮತ ಚಲಾಯಿಸುವ ಮೂಲಕ ವ್ಯಕ್ತಪಡಿಸಲು ಅನುಕೂಲವಾಗುವಂತೆ ಮತಪತ್ರದಲ್ಲಿ ಕೊನೆಯ ಅಭ್ಯರ್ಥಿಯ ನಂತರದ ಪ್ಯಾನಲ್‌ನಲ್ಲಿ "NOTA"/ "ಮೇಲ್ಕಂಡ ಯಾರೂ ಅಲ್ಲ" ಎಂದು ಮುದ್ರಿಸಲಾಗಿರುತ್ತದೆ.
- ಭಾವಚಿತ್ರವಿರುವ ಮತಪತ್ರ: ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಂದೇ ವಾರ್ಡಿನಲ್ಲಿ ಒಂದೇ ಹೆಸರಿನ ಅಭ್ಯರ್ಥಿಗಳು ಸ್ಪರ್ಧಿಸುವ ಸಂದರ್ಭಗಳಿರುವುದರಿಂದ, ಅಭ್ಯರ್ಥಿಗಳನ್ನು ಗುರುತಿಸಲು ಮತಪತ್ರದಲ್ಲಿ ಅವರ ಹೆಸರಿನ ಮುಂದೆ ಅವರ ವೃತ್ತಿ ಅಥವಾ ವಿಳಾಸ ಇತ್ಯಾದಿಗಳನ್ನು ತೋರಿಸಲಾಗುತ್ತಿತ್ತು ಆದರೂ ಸಹ ಮತದಾರನಿಗೆ ಗೊಂದಲ ಉಂಟಾಗುವುದನ್ನು ತಪ್ಪಿಸಲು ಮತಪತ್ರದಲ್ಲಿ ಎಲ್ಲಾ ಅಭ್ಯರ್ಥಿಗಳ ಹೆಸರಿನ ಮುಂದೆ ಅವರ ಇತ್ತೀಚಿನ ಭಾವಚಿತ್ರ ಮುದ್ರಿಸುವಂತೆ ಕ್ರಮ ಕೈಗೊಳ್ಳಲಾಗಿದೆ.
- ಘೋಷಣಾ ಪತ್ರ / ಪ್ರಮಾಣಪತ್ರ: ಮತದಾರನಿಗೆ ಅಭ್ಯರ್ಥಿಯ ಪೂರ್ವಾಪರಗಳನ್ನು ತಿಳಿದುಕೊಳ್ಳಲು ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯು ನಾಮಪತ್ರದೊಂದಿಗೆ, ತನ್ನ ಹಿನ್ನೆಲೆ, ಚರಾಸ್ತಿ ಮತ್ತು ಸ್ಥಿರಾಸ್ತಿಗಳ ವಿವರಗಳು, ತನ್ನ ಸ್ವವಿವರ, ವಿದ್ಯಾರ್ಹತೆ ಆದಾಯದ ಮೂಲಗಳನ್ನು ಪರಿಷ್ಕೃತ ನಮೂನೆಯಲ್ಲಿ ಘೋಷಣಾ ಪತ್ರ / ಪ್ರಮಾಣ ಪತ್ರ (Affidavit) ಸಲ್ಲಿಸಬೇಕಾಗಿರುತ್ತದೆ.
- ಚುನಾವಣಾ ಅಧಿಸೂಚನೆ: ಜಿಲ್ಲಾಧಿಕಾರಿಗಳು ಆಯೋಗವು ಆದೇಶಿಸಿದ ಚುನಾವಣಾ ವೇಳಾಪಟ್ಟಿಯನ್ನು ಅನುಸರಿಸಿ, ಚುನಾವಣಾ ಅಧಿಸೂಚನೆಯನ್ನು ಹೊರಡಿಸುವರು.
- ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆಯನ್ನು ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳ ಉಪಚುನಾವಣೆಯನ್ನು ಶಾಂತಿ ಮತ್ತು ಸುವ್ಯವಸ್ಥೆಯಿಂದ ನಡೆಸಲು ಎಲ್ಲಾ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಹಾಗೂ ಸಾರ್ವಜನಿಕರು ಸಹಕಾರ ನೀಡುವಂತೆ ಕೋರಲಾಗಿದೆ.

ಈ ಬಗ್ಗೆ ಎಲ್ಲಾ ಪತ್ರಿಕಾ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಸಹಕರಿಸುವಂತೆ ಕೋರಲಾಗಿದೆ.

(ನಾಗರಾಜು. ಎನ್. ಆರ್)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.
11/08/2021

**ಇವರಿಗೆ:**

1.ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2.ವ್ಯವಸ್ಥಾಪಕರು/ಸಂಪಾದಕರು, ಪತ್ರಿಕೆ/ ದೂರ ದರ್ಶನ.

## ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆ, 2021

### ಅನುಬಂಧ- 1

ಸಂಖ್ಯೆ: ರಾಚುಆ/98/ಇಯುಬಿ/2021, ದಿನಾಂಕ: 11-08-2021

| ಕ್ರ.ಸಂ. | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಯ ಹೆಸರು | | ಚುನಾವಣೆ ನಡೆಯುವ ವಾರ್ಡ್‌ಗಳ ಸಂಖ್ಯೆ |
|---|---|---|---|---|
| 1 | ಬೆಳಗಾವಿ | ಬೆಳಗಾವಿ | ಮಹಾನಗರಪಾಲಿಕೆ | 1 ರಿಂದ 58 |
| 2 | ಕಲಬುರಗಿ | ಕಲಬುರಗಿ | ಮಹಾನಗರಪಾಲಿಕೆ | 1ರಿಂದ 55 |
| 3 | ಧಾರವಾಡ | ಹುಬ್ಬಳ್ಳಿ - ಧಾರವಾಡ | ಮಹಾನಗರಪಾಲಿಕೆ | 1ರಿಂದ 82 |
| | | | **ಒಟ್ಟು ವಾರ್ಡುಗಳು** | **195** |

### ಅನುಬಂಧ-2

ಸಂಖ್ಯೆ: ರಾಚುಆ/98/ಇಯುಬಿ/2021, ದಿನಾಂಕ: 11-08-2021

| ಕ್ರ.ಸಂ. | ಜಿಲ್ಲೆ | ಕ್ರ.ಸಂ. | ನಗರ ಸ್ಥಳೀಯ ಸಂಸ್ಥೆಯ ಹೆಸರು | | ಚುನಾವಣೆ ನಡೆಯುವ ವಾರ್ಡ್‌ಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 1 | ದೊಡ್ಡಬಳ್ಳಾಪುರ | ನಗರಸಭೆ | 1 ರಿಂದ 31 |
| 3 | ಚಿಕ್ಕಮಗಳೂರು | 2 | ತರೀಕೆರೆ | ಪುರಸಭೆ | 1ರಿಂದ 23 |
| 3. | ಬೀದರ್ | 3 | ಬೀದರ್ | ನಗರಸಭೆ | 26 ಮತ್ತು 32 ನೇ ವಾರ್ಡ್ |
| 4 | ಶಿವಮೊಗ್ಗ | 4 | ಶಿವಮೊಗ್ಗ | ನಗರಸಭೆ | 29 ನೇ ವಾರ್ಡ್ |
| | | | | **ಒಟ್ಟು ವಾರ್ಡುಗಳು** | **57** |

## ಅನುಬಂಧ –3

**ಸಂಖ್ಯೆ: ರಾಚುಆ/94/ಇಯುಬಿ/2021, ದಿನಾಂಕ: 11–08–2021**

| ಕ್ರ.ಸಂ. | ಜಿಲ್ಲೆ | ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆಯ ಹೆಸರು | | ವಾರ್ಡಿನ ಸಂಖ್ಯೆ |
|---|---|---|---|---|---|
| 1. | ಮೈಸೂರು | 1 | ಮೈಸೂರು | ಮಹಾನಗರಪಾಲಿಕೆ | 36 |
| 2 | ಬಾಗಲಕೋಟೆ | 2 | ಮುಧೋಳ | ನಗರಸಭೆ | 18 |
| | | 3 | ಬೀಳಗಿ | ಪಟ್ಟಣ ಪಂಚಾಯತ್ | 14 |
| | | 4 | ಮಹಾಲಿಂಗಪೂರ | ಪುರಸಭೆ | 03 |
| | | 5 | ತೇರದಾಳ | ಪುರಸಭೆ | 03 |
| 3 | ಕೊಡಗು | 6 | ವಿರಾಜಪೇಟೆ | ಪಟ್ಟಣ ಪಂಚಾಯತ್ | 13 |
| | | 7 | ಸೋಮವಾರಪೇಟೆ | ಪಟ್ಟಣ ಪಂಚಾಯತ್ | 01 |
| | | 8 | ಸೋಮವಾರಪೇಟೆ | ಪಟ್ಟಣ ಪಂಚಾಯತ್ | 03 |
| 4 | ಉತ್ತರ ಕನ್ನಡ | 9 | ದಾಂಡೇಲಿ | ನಗರಸಭೆ | 11 |
| 5 | ಕಲಬುರಗಿ | 10 | ವಾಡಿ | ಪುರಸಭೆ | 04 |
| | | 11 | ವಾಡಿ | ಪುರಸಭೆ | 23 |
| 6 | ಬೀದರ್ | 12 | ಬಸವಕಲ್ಯಾಣ | ನಗರಸಭೆ | 11 |
| | | 13 | ಬಸವಕಲ್ಯಾಣ | ನಗರಸಭೆ | 23 |
| 7 | ವಿಜಯಪುರ | 14 | ಬಸವನಬಾಗೇವಾಡಿ | ಪುರಸಭೆ | 21 |
| 8 | ಕೋಲಾರ | 15 | ಕೆ.ಜಿ.ಎಫ್. | ನಗರಸಭೆ | 12 |
| 9 | ದಾವಣಗೆರೆ | 16 | ಹರಿಹರ | ನಗರಸಭೆ | 14 |
| 10 | ಬೆಳಗಾವಿ | 17 | ರಾಯಬಾಗ್ | ಪಟ್ಟಣ ಪಂಚಾಯತ್ | 09 |
| | | 18 | ಸವದತ್ತಿ | ಪುರಸಭೆ | 23 |
| 11 | ಕೊಪ್ಪಳ | 19 | ಕುಷ್ಟಗಿ | ಪುರಸಭೆ | 16 |
| 12 | ಗದಗ | 20 | ಮುಳುಗುಂದ | ಪಟ್ಟಣ ಪಂಚಾಯತ್ | 18 |
| 13 | ರಾಮನಗರ | 21 | ರಾಮನಗರ | ನಗರಸಭೆ | 04 |
| | | | | **ಒಟ್ಟು ವಾರ್ಡುಗಳು** | 21 |

(ನಾಗರಾಜು. ಎನ್. ಆರ್.)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ,
ಕರ್ನಾಟಕ.
11/08/2021